ಅ) ಹಾಗಿದ್ದಲ್ಲಿ ಸದರಿ ವಸತಿ ಗೃಹವನ್ನು ಸಂಪೂರ್ಣ ದುರಸ್ತಿ ಮಾಡಿಸುವುದಿಲ್ಲವೆ ನೂತನ ವಸತಿ ಗೃಹಗಳನ್ನು ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೆ ?

ಇ) ಹಾಗಿದ್ದಲ್ಲಿ ಈ ಕಾರ್ಯವನ್ನು ಯಾವಾಗ ಆರಂಭಿಸಲಾಗುವುದು ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಈಗ ಹಾಲಿ ಇರುವ ೧೪ ವಸತಿ ಗೃಹಗಳ ದುರಸ್ತಿಗಾಗಿ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಆ) ಹಣದ ಕೊರತೆಯಿಂದ, ಹೊಸದಾಗಿ ೩ ಮುಂಖ್ಯ ಪೇದೆ ಮತ್ತು ೨೦ ಪೇದೆಗಳ ವಸತಿ ಗೃಹಗಳನ್ನು (ಬಂಟ್ವಾಳದ ಉಳಿದ ಅರಕ್ಷಕ ಸಿಬ್ಬಂದಿಗೆ) ನಿರ್ಮಿಸಲು ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮದವರು ತಮ್ಮ ಯೋಜನೆಯಲ್ಲಿ ಹಂತ ಹಂತವಾಗಿ ನಿರ್ಮಿಸುವ ಯೋಜನೆಯನ್ನು ಹೊಂದಿದೆ.

ಇ) ಈ ಕೆಲಸವನ್ನು ಕರ್ನಾಟಕ ಪೋಲೀಸ್ ಗೃಹ ನಿರ್ಮಾಣ ನಿಗಮದವರು ತಮ್ಮ ಯೋಜನೆಯಲ್ಲಿ ಸಧ್ಯದಲ್ಲೇ ತೆಗೆದುಕೊಳ್ಳುವ ಯೋಜನೆ ಹೊಂದಿರುತ್ತಾರೆ.

ಶ್ರೀ ರಾಮನಾಥ ರೈ.—ಮಾನ್ಯ ಅಧ್ಯಕ್ಷರೇ ಬಂಟ್ವಾಳ ಪೋಲೀಸ್ ಠಾಣೆಯ ವಸತಿ ಗೃಹ ಬಹಳ ಹೀನ ಸ್ಥಿತಿಯಲ್ಲಿದೆ. ಈ ವಸತಿ ಗೃಹ ಬಂಟ್ವಾಳದ ಮಧ್ಯೆ ಪ್ರದೇಶದಲ್ಲಿ ಇದ್ದು ಅಲ್ಲಿನ ವಸತಿ ಗೃಹ ಗಳೆಲ್ಲಾ ಬಿದ್ದು ಹೋಗುವಂತಹ ಸ್ಥಿತಿಗೆ ಬಂದಿವೆ. ಮತ್ತೆ ಕೆಲವು ಮನೆಗಳ ಗೋಡೆಗಳು ಸಹ ಬಿದ್ದು ಹೋಗಿರುವುದರಿಂದ ಅಲ್ಲಿನ ನೌಕರರು ವಾಸ ಮಾಡಲು ಬಹಳ ಕಷ್ಟವಾಗಿದೆ. ಮತ್ತು ನೆರೆ ಬಂದಾಗ ಇವರು ಬಹಳ ತೊಂದರೆ ಪಡುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಮಾನವೀಯ ದೃಷ್ಟಿಯಿಂದ ಆದಷ್ಟು ಬೇಗ ಈ ವಸತಿ ಗೃಹಗಳ ರಿಪೇರಿ ಕೆಲಸ ಮಾಡಿಸಿಕೊಡುವರೇ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಈಗಾಗಲೇ ಅಲ್ಲಿ ರಿಪೇರಿ ಕೆಲಸವನ್ನು ಪ್ರಾರಂಭ ಮಾಡಿಸಿದ್ದೇನೆ. ಒಬ್ಬ ಎಸ್.ಐ. ಮನೆಯನ್ನು ಈಗಾಗಲೇ ರಿಪೇರಿ ಮಾಡಿಸಿ ಅವರು ಆ ಮನೆಗೆ ಬಂದಿದ್ದಾರೆ. ಇನ್ನು ಉಳಿದಿರತಕ್ಕಂಥ ಮನೆಗಳನ್ನು ಸಹ ರಿಪೇರಿ ಮಾಡಿಸಿಕೊಡುತ್ತೇವೆ. ಮತ್ತೇ ಈ ವರ್ಷ ೩ ಜನ ಹೆಡ್ ಕಾನ್‌ಸ್ಟೇಬಲ್‌ರಿಗೆ ಮತ್ತು ೨೦ ಜನ ಪಿ.ಸಿ. ಗಳಿಗೆ ಮನೆಗಳನ್ನು ಕಟ್ಟಿಸಿ ಕೊಡ ಬೇಕೆಂದು ಹೇಳಿ ಗೃಹ ನಿರ್ಮಾಣ ಮಂಡಲಿಯವರಿಗೆ ಹೇಳಿದ್ದೇನೆ, ಮುತ್ತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೪೪ ಕ್ವಾಟ್ರಸ್‌ಗಳನ್ನು ಕಟ್ಟಿಸಿಕೊಡಬೇಕೆಂದು ಹೇಳಿ ಸುಮಾರು ೧.೮೮ ಕೋಟಿ ರೂಪಾಯಿ ಗಳ ಒಂದು ಅಂದಾಜನ್ನು ಕಟ್ಟಿಸಿ ಕೊಡಬೇಕೆಂದು ಹೇಳಿದ್ದೇನೆ.

ಪ್ರಶ್ನೆ ಸಂಖ್ಯೆ. ೫೬೧ (೧೭೧೧)

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಪ್ರಶ್ನೆ ಸಂಖ್ಯೆ. ೫೬೨ (೧೭೧೪)

(ಮಾನ್ಯ ಸದಸ್ಯರ ಪ್ರಶ್ನೆಯನ್ನು ಮುಂದೂಡಲಾಗಿದೆ)

ಬಿಜಾಪುರ ನಗರದಲ್ಲಿ ವ್ಯವಸಾಯ ಉತ್ಪನ ಮಾರುಕಟ್ಟೆ ಸಮಿತಿಯ ಪ್ರದೇಶದಲ್ಲಿ ಆರಕ್ಷಕ ಠಾಣೆಯು ಮಂಜೂರಾತಿ.

೧೭೬೭. ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಮಾನ್ಯ ಗೃಹ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪ ರಲ್ಲಿ ಬಿಜಾಪುರದ ಎ. ಪಿ. ಎಂ. ಸಿ. ಮಾರ್ಕೆಟ್ ಯಾರ್ಡ್‌ಗೆ ಪೋಲೀಸ್ ಠಾಣೆ ಮಂಜೂರಾಗಿದೆ ಎನ್ನುವುದು ನಿಜವಲ್ಲವೇ ?

ಆ) ಹಾಗಾದರೆ ಪೋಲೀಸ್ ಠಾಣೆ ತೆರೆಯಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಇಲ್ಲ.

ಆ) ಪೂರ್ವ ಯೋಜಿತ ಯೋಜನೆ ಪ್ರಕಾರ ಬಿಜಾಪುರದ ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್‌ನಲ್ಲಿ ಪೋಲೀಸ್ ಠಾಣೆ ಶೀಘ್ರವಾಗಿ ತೆರೆಯಂವ ಪ್ರಸ್ತಾವನೆ ಪರಿಶೀಲಿಸಲಾಗುವುದು.

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಅಧ್ಯಕ್ಷರೇ, ಬಿಜಾಪುರದ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಪೋಲೀಸ್ ಠಾಣೆಯನ್ನು ಯಾವ ತಿಂಗಳಿಂದ ಪ್ರಾರಂಭ ಮಾಡುತ್ತಾರೆ ಎನ್ನುವ ಒಂದು ಖಚಿತವಾದಂಥ ದಿನಾಂಕ ನನಗೆ ಮಾನ್ಯ ಮಂತ್ರಿಗಳು ಕೊಡಬೇಕು. ಏತಕ್ಕೆಂದರೆ ನಾನು ಚಿಕ್ಕವನಾಗಿದ್ದಾಗ ಅಲ್ಲಿ ಸುಮಾರು ಎರಡೇ ಎರಡು ಪೋಲೀಸ್ ಠಾಣೆಗಳು ಇದ್ದವು. ಆಂದಿನಿಂದ ಇಂದಿನವರೆವಿಗೆ ಒಂದು ಪೋಲೀಸ್ ಠಾಣೆಯನ್ನು ಸಹ ಸರ್ಕಾರದವರು ಜಾಸ್ತಿ ಮಾಡಿಲ್ಲ. ಇಲ್ಲಿ ಪ್ರತಿ ದಿವಸ ದರೋಡೆ ಮತ್ತು ಕಳ್ಳತನಗಳು ಜಾಸ್ತಿಯಾಗುತ್ತಿರುತ್ತವೆ. ಆದ್ದರಿಂದ ಆದಷ್ಟು ಬೇಗ ಒಂದು ಪೋಲೀಸ್ ಠಾಣೆ ಬೇಕು. ಇದಕ್ಕೆ ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೆ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಜೂನ್ ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆ.

ಪ್ರಶ್ನೆ ಸಂಖ್ಯೆ ೫೬೪ (೧೫೩೦)

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ನಿಷೇದ ಕಾಯ್ದೆ ಮೇರೆಗೆ ದಾಖಲು ಮಾಡಿದ ಪ್ರಕರಣಗಳು,

೧೫೧೪. ಶ್ರೀ ಎ. ಎಮ್. ಹಿಂಡಸ್‌ಗೇರಿ (ಹುಬ್ಬಳ್ಳಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವರದಕ್ಷಿಣೆ ನಿಷೇದ ಕಾಯಿದೆ ಅನ್ವಯ ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ ನೇ ಸಾಲಿನಲ್ಲಿ ನೊಂದಾಯಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ನೊಂದವರಿಂದ ಬಂದ ದೂರುಗಳಿಂದ ಮತ್ತು ಪೋಲೀಸರ ಸ್ವತಹ ತಮಗೆ ತಲುಪಿದ ವರ್ತಮಾನದ ಮೇರೆಗೆ ನೊಂದಾಯಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು ?

ಇ) ವರದಕ್ಷಿಣೆಯಿಂದ ಮತ್ತು ವಧು ದಹನದ ಮತ್ತು ಸಂಬಂಧಿಸಿದ ಇತರೆ ವಿಷಯಗಳಿಂದ ಉದ್ಭವಿಸುವ ಪ್ರಕರಣಗಳನ್ನು ಪರಿಶೀಲಿಸಲು ಸಮಾಜ ಕಾರ್ಯಕರ್ತರು, ಸಮಾಜ ಚಿಂತಕರು ಮತ್ತು ಸಮಾಜ ವಿಜ್ಞಾನಿಗಳನ್ನೊಳಗೊಂಡ ಸಮಿತಿಯೊಂದನ್ನು ಪ್ರತಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸರ್ಕಾರವು ರಚಿಸುವುದೆ ?

ಈ) ವರದಕ್ಷಿಣೆ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಉದ್ಭವಿಸುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಪ್ರತ್ಯೇಕ ನ್ಯಾಯಾಲಯಗಳು ನ್ಯಾಯಾಧಿಕರಣಗಳನ್ನು ಸರ್ಕಾರವು ರಚಿಸುವುದೆ ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ನೊಂದಾಯಿಸಲಾದ ಪ್ರಕರಣಗಳು ಈ ಕೆಳಕಂಡಂತಿವೆ.

	ವರದಕ್ಷಿಣೆ ಸಾವುಗಳು	ವರದಕ್ಷಿಣೆ ಕಿರುಕುಳ
೧೯೮೩-೮೪	೪೦	೨೫
೧೯೮೪-೮೫	೪೩	೨೮
೧೯೮೫-೮೬	೨೦	೩೨
(೧-೪-೧೯೮೫ ರಿಂದ ೨೦-೨-೧೯೮೬ ರವರೆಗೆ)		